ಕವಿತೆ

# ಬೇಲಿಹೂ

ಒಮ್ಮೆ ಹಾದುಹೋಗು, ಗೆಳೆಯ,
ಇತ್ತ ಕಡೆ ಸುಮ್ಮನೆ.
ನಿನ್ನ ನೆರಳು ಸೋಕಿದರೂ ಸಾಕು
ಫಲ್ಲೆಂದು ಅರಳೀತು
ಬೇಲಿಯ ಈ ನೀಲಿಹೂ.

ದೃಷ್ಟಿ ಹಾಯಿಸು ಒಮ್ಮೆ
ಈ ಇತ್ತ:
ನಿನ್ನ ಕಣ್ನೋಟದ ಬಿಸಿಗೆ
ಕರಗಿ ನೀರಾದೀತು
ಮಂಜುಗಟ್ಟಿದ
ನನ್ನ ಚಿತ್ತ.

ತೂರಿಬಿಡು ಈ ಕಡೆ
ನಿನ್ನೊಂದು ಕಿರುನಗೆ.
ಆ ನಿನ್ನ ಕೆನ್ನೆಗುಳಿಯಲ್ಲಿ
ಬೆಚ್ಚಗೆ ಅಡಗಿ ಕುಳಿತೀತು
ನನ್ನ ಕವಿತೆ.

ಚಾಚಿಬಿಡು ನಿನ್ನ ಕೈ
ಒಮ್ಮೆ ನನ್ನೆಡೆಗೆ.
ನಿನ್ನ ಕಿರುಬೆರಳು ಹಿಡಿದು
ನಾ ಹೊರಟೇನು ನಿನ್ನೊಡನೆ
ಈ ಬೇಲಿ ದಾಟಿ
ನೀ ತೋರಿದೆಡೆಗೆ.

● **ನಂದಿನಿ ವಿಶ್ವನಾಥ್**
**ಹೆದ್ದುರ್ಗ**

